
ಧಾರಾವಾಹಿ

# ಬನ್ನಿ, ಬೇಲೂರು ಮಠಕ್ಕೆ

## ಸ್ವಾಮಿ ಆಶುತೋಷಾನಂದ

*(ಹಿಂದಿನ ಸಂಚಿಕೆಯಿಂದ)*




**ನಾ**ವೀಗ ಸ್ವಾಮಿ ವಿವೇಕಾನಂದರ ಕೊಠಡಿಯನ್ನು ಇಣುಕಿ ನೋಡೋಣ. ಸ್ವಾಮೀಜಿಯವರ ಬಟ್ಟೆಗಳು, ಪಾದ ರಕ್ಷೆಗಳು ಮುಂತಾದವುಗಳನ್ನು ಇಲ್ಲಿ ರಕ್ಷಿಸಿಡಲಾಗಿದೆ. ಅವರು ಬಳಸುತ್ತಿದ್ದ ಬೆತ್ತಗಳು, ಪೇಟಗಳು ಇಲ್ಲಿರುವ ಎರಡು ಗಾಜಿನ ಬೀರು ಗಳಲ್ಲಿವೆ. ಹಾಗೆಯೇ ಅವರು ಉಪ ಯೋಗಿಸಿದ್ದ ತಬಲ, ತಂಬೂರಿ ಮತ್ತಿತರ ಸಂಗೀತವಾದ್ಯಗಳನ್ನೂ ಇರಿಸಲಾಗಿದೆ. ಈ ಕೊಠಡಿಯಲ್ಲಿ ಕಾಣುವ ದೊಡ್ಡದೊಂದು ಮಂಚ, ಅವರ ಪಾಶ್ಚಾತ್ಯ ಶಿಷ್ಯರು ಅವರಿಗೆ ಬಳುವಳಿಯಾಗಿ ಕೊಟ್ಟದ್ದು. ಆದರೆ ಅವರು ಅದನ್ನು ಅಷ್ಟಾಗಿ ಉಪಯೋಗಿ ಸುತ್ತಲೇ ಇರಲಿಲ್ಲ. ಅದರ ಪಕ್ಕದಲ್ಲಿಯೇ ಇರುವ ಸಣ್ಣ ಕ್ಯಾನ್‌ವಾಸ್ ಮಂಚದ ಮೇಲೆಯೇ ಅವರು ಮಲಗುತ್ತಿದ್ದರು ಅಥವಾ ನೆಲದ ಮೇಲೆ ಒಂದು ಚಾಪೆ ಹಾಸಿಕೊಂಡು ಮಲಗಿಕೊಳ್ಳುತ್ತಿದ್ದರು.

ಈ ಕೊಠಡಿಯ ಪೂರ್ವದಿಕ್ಕಿನಲ್ಲಿ ಒಂದು ಮೇಜು ಮತ್ತು ಕುರ್ಚಿ ಇವೆ. ಮೇಜಿನ ಮೇಲೆ ಒಂದು ಮರದ ವೇದಿಕೆಯ ಮೇಲೆ ಶ್ರೀರಾಮಕೃಷ್ಣರ ಚಿತ್ರವಿದೆ. ಆ ಛಾಯಾಚಿತ್ರದ ಬದಿಯಲ್ಲಿಯೇ ಪರಿವ್ರಾಜಕ ವೇಷದಲ್ಲಿರುವ ಸ್ವಾಮೀಜಿಯ ಸ್ಫಟಿಕದ ಚಿಕ್ಕ ಮೂರ್ತಿ ಇದೆ. ಅದು ಓವಲ್ ಆಕೃತಿಯಲ್ಲಿದೆ. ಈ ಮೂರ್ತಿಯಲ್ಲಿ ಸ್ವಾಮೀಜಿಯನ್ನು ಮಹಾದೇವ ಶಿವನೆಂದು ಬಿಂಬಿಸಲಾಗಿದೆ. ಅದಕ್ಕೆಂದೇ ಶಿವನ ವಾಹನವಾದ ನಂದಿಯನ್ನು ಅವರ ಮುಂದುಗಡೆ ತೋರಿಸಲಾಗಿದೆ. ಸ್ವಾಮೀಜಿಯ ನಿಕಟವರ್ತಿಯಾದ ಜೊಸೆಫಿನ್ ಮ್ಯಾಕ್‌ಲೌಡ್ ೧೯೧೭ ರಲ್ಲಿ ಇದನ್ನು ಮಾಡಿಸಿದಳು. ಇದರ ಹಲವಾರು ಪ್ರತಿಕೃತಿಗಳನ್ನು ಮಾಡಿಸಿ ಅವಳೇ ಹೇಳಿಕೊಳ್ಳುವಂತೆ, 'ಒಂದು ಬಗೆಯ ಸಂದರ್ಶನ ಚೀಟಿ' ಯಂತೆ (visiting card) ಸಂತೋಷದಿಂದ ಜನರಿಗೆ ಹಂಚಿದಳು. ಸ್ಫಟಿಕವೇ ಏಕೆ? ಅದಕ್ಕೆ ಅವಳ ಒಳನೋಟದ ಉತ್ತರ ಹೀಗಿತ್ತು: "ಸ್ಫಟಿಕವನ್ನು ಬಿಟ್ಟು ಮತ್ತಾವುದೂ ಸ್ವಾಮೀಜಿಯನ್ನು ಪ್ರತಿನಿಧಿಸಲಾಗದು."

ಸ್ವಾಮೀಜಿ ತಮ್ಮ ಕೊಠಡಿಯನ್ನು ಬಹಳವಾಗಿ ಇಷ್ಟಪಡುತ್ತಿದ್ದರು. ತಾವು ಮಾಡುತ್ತಿದ್ದ ಪ್ರಯಾಣಗಳ ನಂತರ, ಕೊಲ್ಕತಾಗೆ ನೀಡಿದ ಸಣ್ಣ ಭೇಟಿಯಾದ ಮೇಲೂ, ಮತ್ತೆ ಇಲ್ಲಿಗೆ ಬಂದಿರುವುದಕ್ಕೆ ಸಂತೋಷಪಡುತ್ತಿದ್ದರು. ಇಲ್ಲಿ ತಮ್ಮ ಬರವಣಿಗೆಯ ಕಾರ್ಯವನ್ನು ಮಾಡುತ್ತಿದ್ದರು, ತಮ್ಮ ಸಹೋದರ ಸಂನ್ಯಾಸಿಗಳು ಮತ್ತು ಶಿಷ್ಯರಿಗೆ ಆದೇಶಗಳನ್ನು ನೀಡುತ್ತಿದ್ದರು, ತಮ್ಮ ಸ್ನೇಹಿತರನ್ನು ಬರಮಾಡಿ ಕೊಳ್ಳುತ್ತಿದ್ದರು, ಊಟ ಮಾಡುತ್ತಿದ್ದರು, ಮಲಗುತ್ತಿದ್ದರು ಮತ್ತು ಭಗವಂತನೊಡನೆ ಏಕಾತ್ಮಭಾವವನ್ನು ಹೊಂದುತ್ತಿದ್ದರು. ಇದೇ ಕೊಠಡಿಯಲ್ಲಿಯೇ ಅಂತಿಮ ಧ್ಯಾನದಲ್ಲಿ ದೇಹತ್ಯಾಗವನ್ನೂ ಮಾಡಿಬಿಟ್ಟರು. ಈ ಕೊಠಡಿಯಲ್ಲಿ ಕುಳಿತುಕೊಂಡು ಅವರು ಬರೆದ ಕೆಲವು ಪತ್ರಗಳ ತುಣುಕುಗಳು ಇಲ್ಲಿವೆ:

"..ಈಗ ಗಂಗಾ ನದೀತೀರದ ಮಠದಲ್ಲಿರುವ ನನ್ನ ಕೋಣೆಯಲ್ಲಿ ಕುಳಿತು ಬರೆಯುತ್ತಿದ್ದೇನೆ. ಇದೆಷ್ಟು ಮೌನವಾಗಿ ನಿಶ್ಚಲವಾಗಿದೆ! ವಿಶಾಲವಾದ ನದಿಯು ಉಜ್ವಲವಾದ ರವಿಕಿರಣಗಳೊಂದಿಗೆ ನರ್ತಿಸುತ್ತಿದೆ. ಕೇವಲ ಒಮ್ಮೊಮ್ಮೆ ಇಲ್ಲಿಗೆ ಬರುವ ಸಾಮಾನು ತರುವ ದೋಣಿಗಳು ತಮ್ಮ ಹುಟ್ಟುಹಾಕುವಿಕೆಯಿಂದ ಈ ಮೌನವನ್ನು ಭಂಗಿಸುತ್ತವೆ. ಇಲ್ಲಿ ಈಗ ಚಳಿಗಾಲ. ಆದರೆ ಮಧ್ಯಾಹ್ನದ ಹೊತ್ತು ಪ್ರತಿದಿನವೂ ಶಾಖವಾಗಿ ಪ್ರಕಾಶಮಾನವಾಗಿರುತ್ತದೆ... ಎಲ್ಲೆಡೆಯೂ ಹಸಿರು ಹೊಂಬಣ್ಣಗಳಿಂದ ಕೂಡಿದೆ. ಹುಲ್ಲು ಮುಟ್ಟುವುದಕ್ಕೆ ಮಕಮಲ್ಲಿನ ಬಟ್ಟೆಯಂತಿದೆ. ಆದರೂ ಗಾಳಿ ಶೀತಲವಾಗಿ, ತೇವಾಂಶವಿಲ್ಲದೆ ಆಹ್ಲಾದಕರವಾಗಿದೆ."

(ನಿವೇದಿತಾಗೆ ಬರೆದ ಪತ್ರ, ದಿನಾಂಕ: ೧೯.೧೨.೧೯೦೦)

"...ಇನ್ನೂ ಚಂದ್ರೋದಯವಾಗಿಲ್ಲ. ಆದರೆ ನದಿಯ ಮೇಲೆ ಸೂರ್ಯನಿಲ್ಲದ ಕಾಂತಿ ಇದೆ. ಗಂಗಾನದಿ (ಮಳೆಯಿಂದಾಗಿ ತುಂಬಿ ಹರಿಯುತ್ತಿರುವಳು) ಮನೆಯ ಗೋಡೆಗಳಿಗೆ ಅಪ್ಪಳಿಸುತ್ತಿದೆ. ಅಸಂಖ್ಯಾತ ಪುಟ್ಟ ಪುಟ್ಟ ದೋಣಿಗಳು ಕತ್ತಲಲ್ಲಿ ಹೋಗುತ್ತ ಬರುತ್ತ ಇವೆ. ಆ ಕಾಲದಲ್ಲಿ ನದಿಗೆ ಬರುವ ಒಂದು ಬಗೆಯ ಮೀನನ್ನು ಹಿಡಿಯಲು ಅವು ಬಂದಿರುವುವು...